ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ದಿನಾಂಕ: 01.04.2025 ರಂದು ನಡೆದ 49ನೇಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 49ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 01.04.2025 ರಂದು ಮಂಗಳವಾರ ಬೆಳಗ್ಗೆ 11:00ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. ಡಾ. ಎಸ್ ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಶ್ರೀ ವಿಶ್ವನಾಥ ಪಿ ಹಿರೇಮಠ. ಕುಲಸಚಿವರು, ಕಸಂವಿ — ಸದಸ್ಯರು
3. ಶ್ರೀಮತಿ ಉಮಾ ಕೆ, ಜಂಟಿ ಕಾರ್ಯದರ್ಶಿಗಳು
   ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಶ್ರೀ. ಕುಮಾರ ಎನ್,
   ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ)
   ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ಶ್ರೀ ಕುಮಾರ ಎಸ್, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

**ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.**

| | |
|---|---|
| ವಿಷಯ 1 | **48ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ.** |
| ಟಿಪ್ಪಣಿ | ದಿನಾಂಕ:29.10.2024ರ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. |
| ವಿಷಯ 2 | **48ನೇ ಸಭೆಯ ನಡಾವಳಿಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 48ನೇ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ. ಅದರ ವಿಷಯ ಸಂಖ್ಯೆ (04)ಕ್ಕೆ ಸಂಬಂಧಿಸಿದ ತಿದ್ದುಪಡಿ ಆದೇಶವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | **ಅಕ್ಟೋಬರ್,ನವೆಂಬರ್ ಮತ್ತು ಡಿಸೆಂಬರ್–2024 ರವರೆಗಿನ ಮೂರು ತಿಂಗಳ ಜಮಾ-ಖರ್ಚನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಅಕ್ಟೋಬರ್,ನವೆಂಬರ್ ಮತ್ತು ಡಿಸೆಂಬರ್–2024 ರವರೆಗಿನ ಮೂರು ತಿಂಗಳ ಜಮಾ-ಖರ್ಚನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |

| | |
|---|---|
| ವಿಷಯ 4 | ಡಾ.ಬಿ.ಆರ್ ಅಂಬೇಡ್ಕರ್ ಸ್ಟಡೀಸ್ ಡಿಪ್ಲೋಮಾಗೆ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ. |
| ಟಿಪ್ಪಣಿ | ಡಾ.ಬಿ.ಆರ್ ಅಂಬೇಡ್ಕರ್ ಸ್ಟಡೀಸ್ ಡಿಪ್ಲೋಮಾ ಕೋರ್ಸ್‌ಗೆ 2023-24ನೇ ಸಾಲಿಗೆ ಪ್ರವೇಶ ಶುಲ್ಕ ರೂ.2500/- ನಿಗದಿಯಾಗಿದ್ದು, ಈಗ 2024-25ನೇ ಸಾಲಿಗೆ ರೂ.3500/-ಗೆ ಪರಿಷ್ಕರಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ. ಆದ್ದರಿಂದ ವಿದ್ಯಾರ್ಥಿ ದಾಖಲಾತಿಯನ್ನು ಕಾಯ್ದುಕೊಳ್ಳಲು 2023-24ನೇ ಸಾಲಿನ ಶುಲ್ಕವನ್ನೇ ಮುಂದುವರೆಸಲು ಮತ್ತು ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಿಂದ ಮರುಪಾವತಿಸಲು ಕೋರಿ ಸಂಯೋಜಕರು ಮನವಿ ಸಲ್ಲಿಸಿರುತ್ತಾರೆ. ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಮಗ್ರವಾಗಿ ಚರ್ಚಿಸಿದ ನಂತರ ಈ ಕೆಳಕಂಡಂತೆ ಒಪ್ಪಿತು.**<br>**1. ರೂ.3500/- ರಿಂದ ರೂ.2500/-ಕ್ಕೆ ಇಳಿಸಿ ಶುಲ್ಕ ನಿಗದಿಪಡಿಸಿತು.**<br>**2. ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಶುಲ್ಕ ರಹಿತವಾಗಿ ನೋಂದಣಿಯಾದ ತಕ್ಷಣ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕ್ರಿಯಾ ಯೋಜನೆಯಲ್ಲಿ ಒದಗಿಸಿರುವ ಮೊತ್ತದಲ್ಲಿ ಸದರಿ ರೂ.2500/-ಗಳನ್ನು ಮರು ಹೊಂದಾಣಿಕೆ ಮಾಡುವ ಷರತ್ತಿನೊಂದಿಗೆ ಅನುಮೋದಿಸಲಾಯಿತು. ಇದರಿಂದ ಎಸ್‌ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡಲು ಸಹಮತಿಸಲಾಯಿತು.** |
| ವಿಷಯ 5 | **ಬ್ಲಾಕ್ ಗ್ರಾಂಟ್‌ನಲ್ಲಿ ಉಳಿದಿರುವ ಅನುದಾನವನ್ನು ಸರ್ಕಾರಕ್ಕೆ ಮರುಪಾವತಿಸಿರುವ ಬಗ್ಗೆ.** |
| ಟಿಪ್ಪಣಿ | 2020-21ನೇ ಸಾಲಿನಲ್ಲಿ ಅನುದಾನಿತ ಸಂಸ್ಕೃತ ಪಾಠಶಾಲಾ ಸಿಬ್ಬಂದಿಗಳಿಗೆ ಒದಗಿಸಿರುವ ಅನುದಾನದಲ್ಲಿ ಉಳಿಕೆಯಾದ (ಬಡ್ಡಿ ಸೇರಿ) ರೂ.596.83ಲಕ್ಷಗಳಲ್ಲಿ ರೂ.200 ಲಕ್ಷಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಭರಿಸಲು ಹಾಗೂ ರೂ.150 ಲಕ್ಷಗಳನ್ನು ಅನುದಾನಿತ ಸಂಸ್ಕೃತ ಪಾಠಶಾಲಾ ಮತ್ತು ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿನ ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣಕ್ಕೆ ಪಾವತಿಸಲು, ಸರ್ಕಾರವು ಅನುಮತಿ ನೀಡಿ ಆದೇಶಿಸಿದ್ದಂತೆ ಕ್ರಮವಹಿಸಲಾಗಿದೆ. ಮುಂದುವರೆದು, ಸರ್ಕಾರದ ನಿರ್ದೇಶನದಂತೆ ಉಳಿಕೆ ಅನುದಾನ ಮತ್ತು ಬಡ್ಡಿ ಸೇರಿ ರೂ.246.83ಲಕ್ಷಗಳನ್ನು ದಿನಾಂಕ:27.01.2025ರಲ್ಲಿ ಲೆಕ್ಕಶೀರ್ಷಿಕೆ 2202-05-911-0-02-364ಗೆ ಜಮೆ ಮಾಡಲಾಗಿದೆ. ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸ್ಥಿರೀಕರಿಸಿತು.** |
| ವಿಷಯ 6 | **ಸರ್ಕಾರದಿಂದ ಬಿಡುಗಡೆಯಾದ ಅನುದಾನ ಒಪಿಎಸ್ (ಹಳೇ ಪಿಂಚಣಿ) ರೂ.88 ಲಕ್ಷಗಳು ಹಾಗೂ ಬಡ್ಡಿ ಮೊತ್ತ ರೂ.14,91,808/- ಸೇರಿ ಒಟ್ಟು ರೂ.1,02,91,808/- ರೂಗಳನ್ನು ಮರು ಪಾವತಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಳೇ ಪಿಂಚಣಿಯ ಸಿಬ್ಬಂದಿಗಳಿಗಾಗಿ (ಒಪಿಎಸ್) ಸರ್ಕಾರದಿಂದ ಲೆಕ್ಕ ಶೀರ್ಷಿಕೆ 2202-05-103-0-23-118-ಯಲ್ಲಿ ಸಹಾಯಾನುದಾನ ವಿಶ್ರಾಂತಿ ವೇತನ ಅಡಿಯಲ್ಲಿ 2018-19ನೇ ಸಾಲಿಗೆ 19ಲಕ್ಷ ರೂಗಳು, 2019-20ನೇ ಸಾಲಿಗೆ 19ಲಕ್ಷ ರೂಗಳು, ಮತ್ತು 2022-23ನೇ ಸಾಲಿಗೆ 50ಲಕ್ಷ ರೂಗಳು ಸೇರಿ ಒಟ್ಟು ರೂ.88 ಲಕ್ಷ ಬಿಡುಗಡೆಯಾಗಿದೆ. ಈ ಮೊತ್ತಕ್ಕೆ ಬ್ಯಾಂಕಿನಿಂದ ರೂ.14,91,808/- ಬಡ್ಡಿ ಜಮೆಯಾಗಿರುತ್ತದೆ. ಇದರಿಂದ ಒಟ್ಟಾರೆ ರೂ.1,02,91,808/- ರೂಗಳಾಗುತ್ತದೆ. ಈ ಮೊತ್ತವನ್ನು ಹಳೇ ಪಿಂಚಣಿ ಖಾತೆಯ ಠೇವಣಿಯಲ್ಲಿ ಇಡಲಾಗಿದೆ. ಈ ನಡುವೆ ಸರ್ಕಾರದ ಪತ್ರ ಸಂಖ್ಯೆ: ಇಡಿ 75 ಹೆಚ್‌ಪಿಯು 2025 ದಿನಾಂಕ:09.07.2024 ಹಾಗೂ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ:ಆಇ 783 ವೆಚ್ಚ -8/2024 ದಿನಾಂಕ: 07.01.2025ರಂತೆ ಪಿಂಚಣಿ ಅನುದಾನ ರೂ.182.67 ಲಕ್ಷಗಳನ್ನು ಕೂಡಲೇ ಸರ್ಕಾರದ ಲೆಕ್ಕ ಶೀರ್ಷಿಕೆ:2202-05-911-0-02-364ಗೆ ಜಮೆ ಮಾಡುವಂತೆ ಸರ್ಕಾರದಿಂದ ನಿರ್ದೇಶಿತವಾಗಿದೆ. ಆದರೆ ಸರ್ಕಾರದಿಂದ ಹಳೇ ಪಿಂಚಣಿಗಾಗಿ ಬಿಡುಗಡೆ ಮಾಡಲಾದ ಅನುದಾನ ಮತ್ತು ಬಡ್ಡಿ ಸೇರಿ ರೂ.1,02,91,808/-ಗಳು ಮಾತ್ರ ಇದೆ. ಈ ಹಿನ್ನಲೆಯಲ್ಲಿ ರೂ. 1,02,91,808/-ರ ಮೊತ್ತವನ್ನು ಮಾತ್ರ ಸರ್ಕಾರದ ಲೆಕ್ಕ ಶೀರ್ಷಿಕೆ:2202-05-911-0-02-364ಗೆ ಮರುಪಾವತಿ ಮಾಡುವ ವಿಷಯದಲ್ಲಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ರೂ.1,02,91,808/-ರ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ:2202-05-911-0-02-364ಗೆ ಮರುಪಾವತಿಸಲು ಅನುಮೋದಿಸಿತು.** |
| ವಿಷಯ 7 | **2016-17ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಮಂಜೂರು ಮಾಡಿರುವ ಮೊತ್ತದಲ್ಲಿ ಉಳಿದಿರುವ ಅನುದಾನದ ಮೊತ್ತ ರೂ.8,68,900/-ನ್ನು ಶೈಕ್ಷಣಿಕ ಕಾರ್ಯಕ್ರಮಕ್ಕೆ ಬಳಸಿಕೊಳ್ಳುವ ಬಗೆಗೆ.** |
| ಟಿಪ್ಪಣಿ | 2016-17ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಸರ್ಕಾರವು ರೂ.80 ಲಕ್ಷಗಳ ಅನುದಾನವನ್ನು ಆದೇಶ ಸಂಖ್ಯೆ: ಇಡಿ 297 ಯುಎಇ 2016 ದಿನಾಂಕ:13.02.2016ರಲ್ಲಿ ಬಿಡುಗಡೆ ಮಾಡಿತ್ತು. ಸರ್ಕಾರದ ಆದೇಶದಂತೆ ವಿದ್ಯಾರ್ಥಿ ವೇತನವನ್ನು ವಿಶ್ವವಿದ್ಯಾಲಯವು ಬಿಡುಗಡೆ ಮಾಡಿದ್ದು, ಉಳಿಕೆ ಅನುದಾನ ರೂ. 8,68,900/- |

| | |
|---|---|
| | ಬಾಕಿಯಿದೆ. ಸರ್ಕಾರವು 2025-26ನೇ ಸಾಲಿಗೆ ಅಭಿವೃದ್ಧಿಗಾಗಿ ಅನುದಾನವನ್ನು ಒದಗಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ಉಳಿಕೆಯಿರುವ ಬಾಕಿ ವಿದ್ಯಾರ್ಥಿ ವೇತನದ ಅನುದಾನವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಕ್ಕೆ ಬಳಸಿಕೊಳ್ಳುಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.** |
| ವಿಷಯ 8 | **2025-26ನೇ ಸಾಲಿಗೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಕಾರ್ಪಸ್ ನಿಧಿಯಾಗಿ ಇಟ್ಟಿರುವ ಠೇವಣಿಯಲ್ಲಿ ಬಂದಿರುವ ಬಡ್ಡಿಯನ್ನು ಕ್ರಿಯಾ ಯೋಜನೆ ತಯಾರಿಸಿ ಅದರಂತೆ ಅನುಷ್ಠಾನಗೊಳಿಸುವ ಬಗೆಗೆ.** |
| ಟಿಪ್ಪಣಿ | ಸರ್ಕಾರದ ಪತ್ರ ಸಂಖ್ಯೆ: ಇಡಿ 56 ಹೆಚ್‌ಪಿಯು 2022 ದಿನಾಂಕ:30.12.2023ರಂತೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ಒದಗಿಸಲಾದ ಅನುದಾನದಲ್ಲಿ ಬಾಕಿ ಉಳಿದಿರುವ ಅನುದಾನದ ಮೊತ್ತ ರೂ.422.70 ಲಕ್ಷಗಳನ್ನು ರಾಷ್ಟ್ರೀಕೃತ ಬ್ಯಾಂಕ್ ಆದ ಎಸ್‌ಬಿಐ, ಚಾಮರಾಜಪೇಟೆ, ಬೆಂಗಳೂರು ಶಾಖೆಯಲ್ಲಿ ಕಾರ್ಪಸ್ ನಿಧಿಯಾಗಿ ಠೇವಣಿ ಇಡಲಾಗಿದೆ. ಸರ್ಕಾರದ ಆದೇಶದಲ್ಲಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯಿಂದ ವಿಶ್ವವಿದ್ಯಾಲಯವು ಎಸ್‌ಸಿಎಸ್‌ಪಿ/ಟಿಎಸ್‌ಪಿ ವಿದ್ಯಾರ್ಥಿಗಳಿಗೆ ಕೈಗೊಳ್ಳುವ ಕಾರ್ಯಕ್ರಮಗಳ ಮಾಹಿತಿಯ ವಿವರಗಳನ್ನು ಒದಗಿಸಲು ತಿಳಿಸಿರುತ್ತದೆ. ಈ ಹಿನ್ನಲೆಯಲ್ಲಿ 2023-24ರ ಸಾಲಿನಲ್ಲಿ ಅಂದಾಜು ರೂ. 46.70 ಲಕ್ಷಗಳು, 2024-25ರಲ್ಲಿ ಅಂದಾಜು ರೂ.23.60 ಲಕ್ಷಗಳು ಬಡ್ಡಿ ಬಂದಿದೆ. ಒಟ್ಟಾರೆ ಅಂದಾಜು ರೂ.70.30 ಲಕ್ಷಗಳು ಬಡ್ಡಿ ಬಂದಿದೆ. 2025-26ನೇ ಸಾಲಿಗೆ ಅಂದಾಜು ರೂ.25 ಲಕ್ಷಗಳು ಬರುತ್ತದೆ. ಎಲ್ಲವೂ ಸೇರಿ ಒಟ್ಟಾರೆ ಅಂದಾಜು ರೂ.95.30 ಲಕ್ಷಗಳಾಗುತ್ತದೆ. ಈ ಸಂಬಂಧ ಈ ಮೂರು ವರ್ಷಕ್ಕೂ ಸರ್ಕಾರದ ಮಾರ್ಗಸೂಚಿಯಂತೆ ಕ್ರಿಯಾಯೋಜನೆ ತಯಾರಿಸಿ ಅದರಂತೆ ಅನುಷ್ಠಾನಗೊಳಿಸುವ ವಿಷಯದಲ್ಲಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಬಂದಿರುವ/ಬರಲಿರುವ ಬಡ್ಡಿ ಅಂದಾಜು ಸೇರಿ ಒಟ್ಟು ಮೊತ್ತ ರೂ. 95.30 ಲಕ್ಷಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿಯೇ ಸರ್ಕಾರದ ಮಾರ್ಗಸೂಚಿಯಂತೆ ಕ್ರಿಯಾಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಅನುಮೋದಿಸಿತು.** |
| ವಿಷಯ 9 | **2025-26ನೇ ಸಾಲಿನ ಆಯ-ವ್ಯಯವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 2025-26 ಸಾಲಿಗೆ ಸರ್ಕಾರದಿಂದ ಅಭಿವೃದ್ಧಿಗಾಗಿ ಯಾವುದೇ ಅನುದಾನ ಒದಗಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯದ ಆಂತರೀಕ ಸಂಪನ್ಮೂಲದಿಂದ ಬರಬಹುದಾದ ನಿರೀಕ್ಷಿತ ಅಂದಾಜು ಆದಾಯಕ್ಕನುಗುಣವಾಗಿ 2025-26ನೇ ಸಾಲಿಗೆ ಅಂದಾಜು ಆಯ-ವ್ಯಯದ ಕರಡನ್ನು ತಯಾರಿಸಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2025-26ನೇ ಸಾಲಿನ ಆಯ-ವ್ಯಯವನ್ನು ಅನುಮೋದಿಸಿತು.**<br>**ಮುಂದುವರೆದು, ಸರ್ಕಾರವು 2025-26ನೇ ಸಾಲಿಗೆ ಅಭಿವೃದ್ಧಿ ಅನುದಾನ ಒದಗಿಸಿಲ್ಲದ್ದನ್ನು ಚರ್ಚಿಸಲಾಯಿತು. ವಿಶ್ವವಿದ್ಯಾಲಯದ ದೈನಂದಿನ, ಇತರ ಶೈಕ್ಷಣಿಕ ಕಾರ್ಯಚಟುವಟಿಕೆ ಹಾಗೂ ನೌಕರರುಗಳ ಎನ್‌ಪಿಎಸ್ ಮೊತ್ತ ಇತ್ಯಾದಿಗಳನ್ನು ಅನುಷ್ಠಾನಗೊಳಿಸಲು ಮಾಸಿಕ ರೂ.25 ಲಕ್ಷಗಳಂತೆ ವಾರ್ಷಿಕ ರೂ.3 ಕೋಟಿ ಅನುದಾನವು ಅತ್ಯಾವಶ್ಯಕವಾಗಿ ಬೇಕಾಗಿರುವುದನ್ನು ಸಭೆಯ ಮುಂದೆ ತರಲಾಗಿ, ಸಭೆಯು ರೂ.3 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.** |
| ವಿಷಯ 10 | ಪಿಹೆಚ್‌ಡಿ ಕೋರ್ಸ್ ವರ್ಕ್‌ನ ವಾಕ್/ಮೌಖಿಕ ಪರೀಕ್ಷೆಯನ್ನು ಆನ್-ಲೈನ್ ಮೂಲಕ ನಡೆಸುವ ಬಗೆಗೆ. |
| ಟಿಪ್ಪಣಿ | ಸರ್ಕಾರವು 2025-26ನೇ ಸಾಲಿನ ಆಯ-ವ್ಯಯದಲ್ಲಿ ಅಭಿವೃದ್ಧಿಗಾಗಿ ಅನುದಾನ ಒದಗಿಸಿಲ್ಲ. ವಿಶ್ವವಿದ್ಯಾಲಯದ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸಲು ನಿರೀಕ್ಷಿತ ಆದಾಯದ ಪ್ರಮಾಣದಿಂದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾಕಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಆರ್ಥಿಕ ಹೊರೆಯನ್ನು ತಗ್ಗಿಸುವ ದೃಷ್ಠಿಯಿಂದ ಪಿಹೆಚ್‌ಡಿ ಕೋರ್ಸ್ ವರ್ಕ್‌ನ ವಾಕ್/ಮೌಖಿಕ ಪರೀಕ್ಷೆಯನ್ನು ಆನ್-ಲೈನ್ ಮೂಲಕ ನಡೆಸುವುದು ಸೂಕ್ತವಾಗಿರುತ್ತದೆ. ಇದರಿಂದ ಆರ್ಥಿಕ ಹೊರೆಯನ್ನು ತಗ್ಗಿಸಬಹುದಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯು ಸುಧಾರಣೆಯಾಗುವವರೆಗೆ ತಾತ್ಕಲಿಕವಾಗಿ ಆನ್-ಲೈನ್ ಮೂಲಕ ಮೌಖಿಕ ಪರೀಕ್ಷೆಯನ್ನು ನಡೆಸಲು ಅನುಮೋದಿಸಿತು.** |
| ವಿಷಯ 11 | ದೂರ ಶಿಕ್ಷಣ ಮತ್ತು ಮುಕ್ತ ಅಧ್ಯಯನ ಪ್ರಾರಂಭಿಸುವ ಬಗ್ಗೆ. |
| ಟಿಪ್ಪಣಿ | ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಸಂಸ್ಕೃತ ಶಿಕ್ಷಣದ ಪ್ರಚಾರಕ್ಕಾಗಿ ದೇಶ, ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಲ್ಲದೆ ವಿದೇಶಿಯರು ಕೂಡ ಸಂಸ್ಕೃತ ಅಧ್ಯಯನ ಮಾಡಲು ಉತ್ಸುಕರಾಗಿದ್ದಾರೆ. ದೂರ ಶಿಕ್ಷಣ ಮತ್ತು ಮುಕ್ತ ಅಧ್ಯಯನ ಪ್ರಾರಂಭಿಸುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಎಂ.ಎ ಸಾಮಾನ್ಯ ತರಗತಿ ಮಾತ್ರ ನಡೆಯುತ್ತಿದೆ. ಆದರೆ ಕರ್ನಾಟಕ ಸಂಸ್ಕೃತ |

| | |
|---|---|
| | ವಿಶ್ವವಿದ್ಯಾಲಯದಲ್ಲಿ ವಿಶೇಷವಾಗಿ ಯೋಗ, ವಾಸ್ತು, ಜ್ಯೋತಿಷ್ಯ (ಡಿಪ್ಲೋಮೋ) ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳು ಬಿ.ಎ ಶಾಸ್ತ್ರೀ, ಎಂ.ಎ ಆಚಾರ್ಯ ತರಗತಿಗಳಲ್ಲಿ ಅಲಂಕಾರ, ವ್ಯಾಕರಣ, ನವೀನ ನ್ಯಾಯ, ವೇದಾಂತ, ಮೀಮಾಂಸಾ ಇತ್ಯಾದಿ ಶಾಸ್ತ್ರಗಳಲ್ಲಿ ದೂರ ಶಿಕ್ಷಣದ ಮೂಲಕ ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸುವಂತೆ ಬೇಡಿಕೆಗಳು ಬರುತ್ತಿರುವುದರಿಂದ ದೂರ ಶಿಕ್ಷಣವನ್ನು ಪ್ರಾರಂಭಿಸಲು ಯುಜಿಸಿ ಒಲವು ತೋರಿದ್ದು, ರಾಜ್ಯ ಸರ್ಕಾರದಿಂದ ಅನುಮತಿ ದೊರೆತ ನಂತರ ಪ್ರಾರಂಭಿಸಲಾಗುವುದು. ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು. |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

1/4/2025

(ಕುಮಾರ ಎಸ್)
ಹಣಕಾಸು ಅಧಿಕಾರಿಗಳು
ಸದಸ್ಯ ಕಾರ್ಯದರ್ಶಿ

1/4/25.

(ಡಾ. ಎಸ್. ಅಹಲ್ಯ)
ಕುಲಪತಿಗಳು
ಅಧ್ಯಕ್ಷರು

**ದಿನಾಂಕ: 01.04.2025**